ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಬೆಂಗಳೂರು ಗೊಲ್ಲರಪ್ಯಾಟೆಯಲ್ಲಿ ಯಿರತಕ್ಕ ದಿವಾಳಿಯಾದ ಡಿಕ್ರೀ ದೇಣೇದಾರ ತಿರಕಪ್ಪನ ವಿಷಯದಲ್ಲಿ—

ಸನ್ 1889ನೇ ಇಸವಿ ದಿವಾಳೀ ಕೇಸ್ ನಂಬರ್ 639.

ಹುಕುಂ

ಮೇಲ್ಕಂಡ ತಿರಕಪ್ಪನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜ್‌ರಾದ ಮೆಸ್ಟರ್ ಅನಂತ ಸ್ವಾಮಿರಾಯರವರ ರೂಬರೂ ಅರ್ಜೀದಾರನಾದ ತಿರಕಪ್ಪನ್ನ ಖುದ್ದಾಗಿ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ—ಯಾರನ್ನೂ ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ತಿರಕಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದೆಲ್ಲದೆ ಇದಕ್ಕೆ ಲಗ್ನತ್ತಾಗಿರುವ ಪಟ್ಟ್ಯಯಲ್ಲಿ ಕಂಡ ಯಾವ ಸಾಲಕ್ಕೂ ಇಸ್ಕ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಫಿಬ್ರವರಿ 14ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದಪಟ್ಟ್ಯ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗದೇಣೀ ಬಾಬತ್ತು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ನಿಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ರಾಣಾಂಗನ ಪ್ಯಾಟೇಲಿರುವ ಸಿಂಗಪ್ಪನವರ ವೆಂಕಟರವಣಪ್ಪ ..	26 0 0	1888ನೇ ಜೂನ್ 11	ಮನೆ ಬಾಡಿಗೆ ಬಾಬತು.	
2	ಬೆಂಗಳೂರಲ್ಲಿರುವ ನೆಲ್ಲಮಂಡಿ ನಂಜಪ್ಪ ..	20 0 0	1889ನೇ ಜುಲೈ 11	ಕೈಸಾಲದ ಬಾಬತು	
3	ಡಿಟೋ ತರಗಿನಮಂಡಿ ಚಿಕ್ಕವೀರಪ್ಪ ..	33 0 0	1889 ಜನವರಿ 24	ಡಿಟೋ	
4	ಬೆಂಗಳೂರಲ್ಲಿರತಕ್ಕ ಬತಾಯಿ ನಾರಣಪ್ಪ ..	15 0 0	1889ನೇ ಮಾರ್ಚಿ 25	ಡಿಟೋ	
5	ಡಿಟೋ ಸಾವಂದಪ್ಪನವರ ಪಾಪಣ್ಣ ..	50 0 0	1888 ಜನವರಿ 24	ತಂಸೂಕು ಬಾಬತು	
6	ಡಿಟೋ ಗೊಲ್ಲರಪ್ಯಾಟೇಲಿರುವ ಕೊಪ್ಪದಪುಟ್ಟಪ್ಪ.	32 8 0	1888 ಜನವರಿ 5	ರಾಗಿ ತೆಗದುಕೊಂಡ ಬಾಬತು	
7	ಡಿಟೋ ಅಕ್ಕ್ಕಿಪ್ಯಾಟೇಲಿರುವ ಜೆನ್ನಸಂದ್ರದ ಮುನಿಯಪ್ಪ ..	15 0 0	1889 ಜನವರಿ	ಕಂತು ಪತ್ರದ ಬಾಬತು	
8	ಡಿಟೋ ಉಪ್ಪಿನಮಂಡಿ ವೇಲುಮೊದಲಿಯಾರ್ರು ..	10 0 0	1889 ಜುಲೈ 10	ಕೈಸಾಲದ ಬಾಬತು	
9	ಡಿಟೋ ಕುಂಬಾರ ಪ್ಯಾಟೇಲಿರತಕ್ಕ ಗೊಲ್ಲರ ವೆಂಕಟಪ್ಪ ..	57 8 0	1888	ಬೆಂಗಳೂರು ಸಬ್ ಕೋರ್ಟು 1888 ಸಿವಿಲ್ 181ನೇ ಡಿಕ್ರಿ ಬಾಬತು	
	ಜುಮ್ಲಾ ..	259 0 0			

ಚಿಂತಾಮಣಿ ತಾಲ್ಲೂಕು ಶಿಂಗಸಂದ್ರದಲ್ಲಿ ಯಿರತಕ್ಕ ದಿವಾಳೀಯಾದ ಡಿಕ್ರೀ ದೇಣೇದಾರ ಚಿಕ್ಕ ಚವ್ವಡಪ್ಪನ ವಿಷಯದಲ್ಲಿ—

ಸನ್ 1889ನೇ ಇಸವಿ ದಿವಾಳೀ ಕೇಸ್ ನಂಬರ್ 1045.

ಹಕುಂ

ಮೇಲ್ಕಂಡ ಚಿಕ್ಕ ಚವ್ವಡಪ್ಪನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜ್‌ರಾದ ಮೆಸ್ಟರ್ ಅನಂತಸ್ವಾಮಿರಾಯರವರ ರೂಬರೂ ಅರ್ಜೀದಾರನಾದ ಚಿಕ್ಕ ಚವ್ವಡಪ್ಪನ ಪರವಾಗಿ ಪ್ಲೀಡರ್ ಮೆಸ್ಟರ್ ಗಂಗಾಧರಯ್ಯನವರನ್ನು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—ಯಾರುನ್ನೂ ಹಾಜರಾಗಲಿಲ್ಲಾ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಹೆಕ್ಕ ಜವುಜಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾಪವೆನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಫಿಬ್ರವರಿ 21ನೇ ತಾರೀಖಿನಲ್ಲಿ ಈ ಕೋರ್ಟುಮೊಹರ್ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರ ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.			ಯಾವಾಗ ದೇಣೆ ಉಂಟಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಚಿಂತಾಮಣೀಲಿ ಯಿರತಕ್ಕ ಕೊಮರ್ಲ ವೆಂಕಟೇಶಯ್ಯ ..	114	0	0	ಅಪೀಲ್ ನಿವರಿಸಿ ಇಪ್ಪತ್ತೆರಡನೇ ಜನವರಿ ೧೮೯೦	ಕಾಲಂನಲ್ಲಿ ಹೇಳಿರುವ ಪ್ರಕಾರ ಸದರೀ ಪ್ರತಿವಾದಿಗಳ ಸ್ವಾಧೀನದಲ್ಲಿರುವ ಸ್ಥಿರಾಸ್ತಿ.	
2	ಡಿಟೋ ಈಪ್ಪಲಮಡಗು ಲಕ್ಷ್ಮಯ್ಯ ..	50	0	0			
3	ಚೇಗು ಮುನಿರಾಮಯ್ಯ ಚಿಂತಾಮಣಿ ..	20	0	0			
4	ಪೋಲೇಟಿ ಸೀನಯ್ಯ ಡಿಟೋ ..	16	0	0			
5	ಚಿಂತಾಮಣಿ ತಾಲ್ಲೂಕು ದೇವನಪಲ್ಲೀಲಿರುವ ಚಿನ್ನಪ್ಪ ..	150	0	0			
6	ಚಿಂತಾಮಣಿಗೆ ಕೇರಿದ ತಿಮ್ಮಸಂದ್ರದಲ್ಲಿರತಕ್ಕ ದಾಸಪ್ಪ ..	30	0	0			
7	ಡಿಟೋ ಗ್ರಾಮದಲ್ಲಿರುವ ರಾಮಂಣ ..	20	0	0			
8	ಚಿಂತಾಮಣಿ ತಾಲ್ಲೂಕು ಬೈಲಪಲ್ಲಿ ಕದರಪ್ಪ ..	50	0	0			
9	ಡಿಟೋ ಗ್ರಾಮದಲ್ಲಿರುವ ಚಿನ್ನಪ್ಪ ..	50	0	0			
	ಜುಮ್ಲಾ ..	500	0	0			

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಪ್ಯಾರ್ಟೀಷನ್ ಆಫೀಸ್.

23ನೇ ಮಾಹೆ ಮೇ 1890ನೇ ಇಸವಿ.

ಇಸ್ತಿಹಾರ್ನಾಮೆ.

ಹೊನ್ನವಳ್ಳಿ ಪ್ಯಾರ್ಟೀಷನ್ ವಾಜಿಬರಾಗಿ ಯಿದ್ದು ಹಾಲಿ ಮೃತಪಟ್ಟು ಯಿರುವ ಶೇಷ ಯಂಬುವನಿಗೆ ಸದರೀಯವನು ಸದರೀ ಪ್ಯಾರ್ಟೀಷನಿನಲ್ಲಿ ಕಾವುಗಾರಿ ಮಾಡಿಸಿದ್ದಕ್ಕಾಗಿ (83—5—6) ರೂಪಾಯಿಗಳು ಸಲ್ಲಬೇಕಾಗಿ ಯಿದೆ. ಈ ಮೊಬಲಗ್ಯೆ ಬಾಧ್ಯತೆವುಳ್ಳ ಜನಗಳು ಈ ತಾರೀಖು ಲಾಗಾಯತು ಆರು ತಿಂಗಳ ವಳಗಾಗಿ ಹಕ್ಕುದಾರಿ ಸರಟಿಫಿಕೇಟು ನೊಡನೆ ನಮ್ಮ ಆಫಿಸಿಗೆ ಅರ್ಜೀಬರದು ಕೊಳ್ಳಬೇಕು, ಈ ವಾಯಿದೆ ಪೂರೈಸಿದನಂತರ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುತ್ತೆ. ನಂತರ ಯಾವ ಹಕ್ಕುದಾರಿಯನ್ನೂ ಮಂಜೂರ್ಮಾಡುವದಿಲ್ಲ.

ಯಸ್. ಬಾಪೂರಾವ್,
ಸಬ್ ಅಸಿಸ್ಟೆಂಟ್ ಕಂಸರ್ವೇಟರ್ ಪ್ಯಾರ್ಟೀಷನ್.